ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ದೂರವಾಣಿ: 080-22343901, 22343980

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು-560001.

ಸಂಖ್ಯೆ: ಕಾಶಿಇ/ಶೈವಿ/18/ವಿಜ್ಞಾನ ಅನುದಾನ/2018-19

ದಿನಾಂಕ:25.03.2019

## ಸುತ್ತೋಲೆ

ವಿಷಯ: ಪದವಿ ವಿಜ್ಞಾನ ಹಾಗೂ ಸ್ನಾತಕೋತ್ತರ ವಿಜ್ಞಾನ ಕೋರ್ಸುಗಳಿಗೆ ಬಿಡುಗಡೆ ಮಾಡಲಾಗಿರುವ ವಿಜ್ಞಾನ ಅನುದಾನ ಬಳಕೆಯ ಬಗ್ಗೆ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ:
1) ದಿನಾಂಕ:21.06.2017, 05.12.2017 ಮತ್ತು 25.01.2017 ರ ಈ ಕಛೇರಿಯ ಅನುದಾನ ಬಿಡುಗಡೆ ಆದೇಶಗಳ ಸಂಖ್ಯೆ:ಕಾಶಿಇ/ಶೈವಿ/38/ ವಿಜ್ಞಾನ ಅನುದಾನ/2017-18 ಹಾಗೂ
2) ದಿನಾಂಕ:21/08/2018, ದಿನಾಂಕ:01.01.2019 ಮತ್ತು ದಿನಾಂಕ:19/03/2019 ರ ಈ ಕಛೇರಿಯ ಅನುದಾನ ಬಿಡುಗಡೆ ಆದೇಶಗಳ ಸಂಖ್ಯೆ:ಕಾಶಿಇ/ಶೈವಿ/18/ವಿಜ್ಞಾನ ಅನುದಾನ 2018-19.
3) ಮಹಾಲೇಖಪಾಲರ ಇಲಾಖೆಯವರು 2018-19ನೇ ಸಾಲಿನ ಇಲಾಖೆಯ ಲೆಕ್ಕತಪಾಸಣೆ ಸಂದರ್ಭದಲ್ಲಿ ನೀಡಿರುವ ಸೂಚನೆ ಮೇರೆಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2017-18 ಮತ್ತು 2018-19ನೇ ಸಾಲಿನಲ್ಲಿ ವಿಜ್ಞಾನ ವಿಷಯಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಕೋರ್ಸುಗಳನ್ನು ಹೊಂದಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅವಶ್ಯವಿರುವ ಪ್ರಯೋಗಾಲಯ ಉಪಕರಣಗಳು ಮತ್ತು ಕೆಮಿಕಲ್ಸ್/ಕನ್ಸುಮಬಲ್ಸ್‌ಗಳನ್ನು ಒದಗಿಸಿಕೊಳ್ಳಲು ಅಗತ್ಯವಿರುವ ಅನುದಾನವನ್ನು ಉಲ್ಲೇಖಿತ ಈ ಕಛೇರಿಯ (1) ಮತ್ತು (2)ರ ಆದೇಶಗಳಲ್ಲಿ ಅನುದಾನವನ್ನು ಬಿಡುಗಡೆ ಮಾಡಿ, ಸದರಿ ಅನುದಾನವನ್ನು ನಿಯಮಾನುಸಾರ ಬಳಸಿಕೊಂಡು 'ಹಣ ಬಳಕೆಯ ಪ್ರಮಾಣ ಪತ್ರ' ವನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

ಆದರೆ ಕೆಲವು ಕಾಲೇಜುಗಳ ಪ್ರಾಂಶುಪಾಲರು ಇಂದಿನವರೆಗೂ ಸದರಿ ಅನುದಾನವನ್ನು ಬಳಸಿಕೊಂಡಿರುವ ಬಗ್ಗೆ ಬಳಕೆ ಪ್ರಮಾಣ ಪತ್ರವನ್ನು ಈ ಕಛೇರಿಗೆ ಸಲ್ಲಿಸಿರುವುದಿಲ್ಲ. ಈ ಬಗ್ಗೆ ಉಲ್ಲೇಖ(3)ರಲ್ಲಿ ಮಹಾಲೇಖಪಾಲರು ಆಕ್ಷೇಪಿಸಿರುತ್ತಾರೆ.

ಆದುದರಿಂದ 2017-18 ಮತ್ತು 2018-19ನೇ ಸಾಲಿನಲ್ಲಿ ವಿಜ್ಞಾನ ಕೋರ್ಸುಗಳಿಗೆ ಬಿಡುಗಡೆ ಮಾಡಲಾಗಿರುವ ಒಟ್ಟು ಅನುದಾನವನ್ನು ಬಳಸಿಕೊಂಡಿರುವ ಬಗ್ಗೆ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ **"ಬಳಕೆ ಪ್ರಮಾಣ ಪತ್ರ"ವನ್ನು ವರ್ಷಾವಾರು** ಪ್ರತ್ಯೇಕವಾಗಿ ದಿನಾಂಕ:10/04/2019ರೊಳಗೆ ಈ ಕಛೇರಿಯ ಶೈಕ್ಷಣಿಕ ವಿಭಾಗಕ್ಕೆ ಸಲ್ಲಿಸಲು ಸೂಚಿಸಿದೆ. ನಿಗದಿತ ದಿನಾಂಕದೊಳಗೆ ಬಳಕೆ ಪ್ರಮಾಣ ಪತ್ರವನ್ನು ಒದಗಿಸದಿರುವ ಕಾಲೇಜುಗಳಿಗೆ 2019-20ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನವನ್ನು ಒದಗಿಸದೇ ತಡೆಹಿಡಿಯಲಾಗುವುದು ಹಾಗೂ ಮುಂದಿನ ಆಗುಹೋಗುಗಳಿಗೆ ಸಂಬಂಧಪಟ್ಟ ಅಂತಹ ಕಾಲೇಜುಗಳ ಪ್ರಾಂಶುಪಾಲರರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದೆಂದು ಈ ಮೂಲಕ ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ಜಂಟಿ ನಿರ್ದೇಶಕರು

ಇವರಿಗೆ:
1) ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ ತರಗತಿಗಳಲ್ಲಿ ವಿಜ್ಞಾನ ಕೋರ್ಸುಗಳನ್ನು ಬೋಧಿಸುವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2) ಸಂಬಂಧಪಟ್ಟ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ- ಮಾಹಿತಿಗಾಗಿ.
3) ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.

*Government of Karnataka*

DEPARTMENT OF COLLEGIATE EDUCATION

**GOVERNMENT OF FIRST GRADE COLLEGE, ____________.**

## UTILIZATION CERTIFICATE

This is to certify that Rs. ________ was sanctioned by the Commissioner for Collegiate Education for the ________________________________________, vide Order No. ________________________________ out of which Rs. ________ is spent as per Government norms, materials were received in good condition and taken into Stock Register of the College on ______________, vide page No.______.

And Rs. ________ was not utilized due to __________________________.

**Sd/-**

**Principal**

Govt. First Grade College, ___________.